ಹ್ಞೀಂಗss ತೆಲಿಗ ಒಂದೊಂದು ಮಾತಾಡಿದ್ರು.

ಇಲ್ಲಬೇ... ಅಂವಾ ಹೊಲಕ್ಕ ಹಾಕೂ ಕೀಟನಾಶಕಾ ಎಣ್ಣೀ ಕುಡದ ಸತ್ತಿರಬೇಕು ಅಂಬೋದು ಇನ್ನೊಬ್ರುದು. ಮಂಟವ್ವನ ಭೋರಾಟ ಮುಗಿಲುಮುಟ್ಟಿತ್ತು.

ಇಷ್ಟ ವರ್ಷ ಬಾಳೇ ಮಾಡಿದ ಪಾರವ್ವಗ ಅವನ ಮಕಾ ಸತೆ ನೋಡಾಕ ಬಿಡಲಿಲ್ಲಾ. ಹಂಗ ಸಾಯಾಕ ಏನಾಗಿತ್ತು? ಚೊಲೋನ ಇದ್ನಲ್ಲ ಅಂತಾ ಪಾರಮ್ಮ ನೆಪ್ಪ ಮಾಡ್ಕೋಳಾಕ ಹತ್ತಿದ್ಲು. ಯಾಂವಾಕಿನೋ ಇಟಗೊಂಡಿದಾನಾ ಅಂತಾ ಮಂದಿ ಅಂದ್ರೂ ಪಾರವ್ವಗ ಕೆಟ್ಟ ಅನಿಸಿರ್ಲಿಲ್ಲ. ಗಂಡಾ ಹೇಂತಿನ್ನ ದೂರಾ ಮಾಡಿದ್ಲಲ್ಲಾ ಅತ್ತೀ ಯಾನs ಯಾಕರೇ ಮಾಡ್ಕೋವಲ್ಲ್ಯಾಕ ಸುಖದಿಂದ ಇದ್ರ ಸಾಕಲ್ಲ ಅಂತಾ ಸಂಕಟಾ ನುಂಕೊಂಡಿದ್ಲು. ಆದ್ರ ಸಾಯೂದ್ರೊಳಗ ಒಮ್ಮೆರ ಗಂಡಗ್ ಖರೇ ಹೇಳ್ಬೇಕು... ಅಂತಾದ್ದೇನೂ ಆಗಿಲ್ಲ... ನಂಬ್ರೀ ಅಂತಾ ಅಂದ್ಕೊಂಡಿದ್ದು ಮಾತ್ರ ಹೊಟ್ಟ್ಯಾಗ ಉಳ್ಕೊಂತು. ನೋವಿನ ಸಿಂಬಿ ಹಂಗ ಕಳ್ಳಿನ್ಯಾಗ ಸುಳ್ಳಿ ಸುತಗೊಂಡು ಕುಂತಬಿಡ್ತು. ದ್ಯಾಮವ್ವನ ಗುಡಿ ಸಂದ್ಯಾಗಿನ ಮನ್ಯಾಗ ಇರಾಕತ್ತಿದ ಮ್ಯಾಲ ಆಚಾರ್ರು ಕತ್ಲಾಗ ಆಗೊಮ್ಮೆ ಈಗೊಮ್ಮೆ ಅಕೀನ್ ಭೇಟ್ಯಾಗಾಕತ್ತಿದ್ರು.

ಹೊಲಸ ಬೈಗಳಾ, ಕೆಟ್ ಮಾತು ಕೇಳಿ ದಡ್ಡು ಬಿದ್ದಹೋದ ಅಕೀಗೆ ಏನೂ ಅನಿಸ್ಲಿಲ್ಲ ಆಚಾರ್ರು ಬಂದ್ರ —"ಬರಬ್ಯಾಡ್ರೀ ಅನ್ನಲಿಲ್ಲ." ಆಚಾರ್ರಗಂತ ಎಳೀ ಎಲಿ ಚಿಕನೀ ಅಡಕಿ ತರೂದು ಮರೀತಿದ್ದಿಲ್ಲ ಅಕೀ. ಏನು ಇಲ್ಲದ ಮಂದೀ ಅಂದ್ರಲ್ಲಾ... ಈಗ ಹಿಂಗ ಇರ್ತೇನಿ. ನರಕಾ ಸಿಕ್ಕರೂ ಸಿಗ್ಲಿಬಿಡು ಅವರಿಗಾಗಿ ಅಂದ್ಕೊಂಡು ಸುಮ್ಮಗಾಗಿಬಿಟ್ಲು.

★★★

ಹವೀಜಾ ಅಲ್ಲೆ ಅಂಗಳಾದಾಗ ಬಿದ್ದಾವ ನೋಡಾಪ್ರಿಲ್ಲದ. ಶಿವಮ್ಮ ಇನ್ನೂ ಬಂದಿಲ್ಲ. ಆಡು ಕೋಳಿ ಹವೀಜಾ ಮೇಯಾಕ ಹತ್ತಿದ್ವು ಯಾರ ಹೆದ್ರಿಕಿ ಇಲ್ಲದss... ಅವನ್ನ ಹೊಡ್ಯಾಕ ಅಕೀಗೆ ಯಾವ ಖಬರೂ ಇಲ್ಲ. ಹತ್ತಿಕೊಳ್ಳಕ ಹೋಗಿದ್ದ ರಿಕ್ಷಾ ಹೊಡಿಯೂ ಹುಸೇನಿ ಪಾರಮ್ಮನ ಒಂದ್ ನಮೂನಿ ನೋಡಿ ಏನಬೇss ಆಚಾರಿ ಸತ್ನಲ್ಲ ಮೊನ್ನಿ... ನೀ ಹೋಗ್ಲಿಲ್ಲಾ ಮಣ್ಣಿಗೆss? ಅಂತಂದು ಡುರ್ರಂತ ರಕ್ಷಾ ತಿರ್ಗಿಸಿಕೊಂಡು ಹೋಗೇ ಬಿಟ್ಟ...

ಪಾರಮ್ಮ ಬಾಯ್ ತಗದು "ಯವ್ವಾ ನೀರ್sss" ಅನ್ನಾಕೂ ಬರ್ದ ಹಂಗ ನೆಲಕ್ ಬಿದ್ಲು. ಕಿಂವ್ಯಾಗ ಪಾರಮ್ಮ ಪಾರಮ್ಮ ಅನ್ನೂ ಆಚಾರಿ ದನಿನ ಕೇಳಿದಂಗಾಗಿ ಹಂಗss ಕಣ್ಮುಚ್ಚಿದ್ಲು..."

---

## ರೇಣುಕಾ ನಿಡಗುಂದಿ

ಕತೆಗಾರ್ತಿ ರೇಣುಕಾ ಧಾರವಾಡದವರು. ಇಪ್ಪತ್ತೈದು ವರ್ಷಗಳಿಗೂ ಹೆಚ್ಚುಕಾಲ ನವದೆಹಲಿಯಲ್ಲಿ ವಾಸ. ಪ್ರಬಂಧ, ಕತೆ, ಕವಿತೆಗಳ ಬರವಣಿಗೆ ಮಾಡಿದ್ದಾರೆ. ನವದೆಹಲಿಯ ಬದುಕಿನ ಚಿತ್ರಣ ಕೊಡುವ 'ದಿಲ್ಲಿ ಡೈರಿಯ ಪುಟಗಳು', ಪಂಜಾಬಿ ಕವಯಿತ್ರಿ ಅಮೃತಾ ಪ್ರೀತಂ ಅವರ ಬದುಕಿನ ಪುಟಗಳ ಬರವಣಿಗೆ 'ಅಮೃತ ನೆನಪುಗಳು' ಅವರ ಪ್ರಕಟಿತ ಪುಸ್ತಕಗಳು. 'ಕಣ್ಣ ಕಣಿವೆ' ಅವರ ಕವಿತೆಗಳ ಸಂಗ್ರಹ. ಲೇಖಕ ಪುರುಷೋತ್ತಮ ಬಿಳಿಮಲೆ ಅವರೊಂದಿಗೆ 'ರಾಜಧಾನಿಯಲ್ಲಿ ಕರ್ನಾಟಕ' ಎಂಬ ಪುಸ್ತಕವನ್ನು ಸಂಪಾದಿಸಿದ್ದಾರೆ.